# <u>ಜಾಲಿಯ ಮರವಂತೆ ಧರೆಯೊಳು</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 250.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 171.
3. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchha Rayaru, page No. 88.
4. **Note:** Lyrics given without highlights are as per Ref. 1. The wordings given in green highlights are as per Ref. 3. The wordings in Ref. 2 are similar to Ref. 1 except few wordings which are not considered here.
5. **Note:** Singer has followed lyrics as in Ref. 2.

ರಾಗ: ಮೋಹನ ತಾಳ: ಅಟ

ಜಾಲಿಯ ಮರವಂತೆ ಧರೆಯೊಳು ದುರ್ಜನರು
ಜಾಲಿಯ ಮರವಂತೆ || ಪ ||

ಮೂಲಾಗ್ರ ಪರಿಯಂತ ಮುಳ್ಳು ಕೂಡಿಪ್ಪಂಥ || ಅಪ ||

ಬಿಸಿಲಲ್ಲಿ ಬಳಲಿ ಬಂದವರಿಗೆ ನೆರಳಿಲ್ಲ
ಹಸಿದು ಬಂದವರಿಗೆ ಹಣ್ಣೂ ಇಲ್ಲ
ಕುಸುಮ ವಾಸನೆಯಿಲ್ಲ ಕೂಡಲು ಸ್ಥಳವಿಲ್ಲ
ರಸದಲ್ಲಿ ಸ್ವಾದವು ವಿಷದಂತೆ ಇರುತಿಹ || ೧ ||

ಊರ ಹಂದಿಗೆ ಷಡ್ರಸಾನ್ನವನಿಕ್ಕಲು
ನಾರುವ ದುರ್ಗಂಧ ಬಿಡುವುದುಂಟೆ
ಘೋರ ಪಾಪಿಗೆ ತತ್ವ ಜ್ಞಾನ ಹೇಳಿದರೆ
ಕ್ರೂರ ಕರ್ಮವ ಬಿಟ್ಟು ಸುಜನನಾಗುವನೆ || ೨ ||

ತನ್ನಿಂದ ಉಪಕಾರ ತೊಟಕಾದರು ಇಲ್ಲ
ಬಿನ್ನಾಣ ಮಾತಿಗೆ ಕೊನೆಯಿಲ್ಲವು
ಅನ್ನಕ್ಕೆ ಸೇರಿದ ಕುನ್ನಿ ಮಾನವರಂತೆ
ಇನ್ನಿವರ ಕಾರ್ಯವು ಪುರಂದರ ವಿಠಲ || ೩ ||

**Note:** Below mentioned lyrics, in green highlights, are as per Ref. 3 above.

ರಾಗ: ಮೋಹನ ತಾಳ: ಅಟ

ಜಾಲಿಯ ಮರವಂತೆ ದುರ್ಜನರೆಲ್ಲ
ಜಾಲಿಯ ಮರವಂತೆ || ಪ ||

ಬಿಸಿಲಲಿ ಬಳಲಿ ಬಂದವರಿಗೆ ನೆರಳಿಲ್ಲ
ಹಸಿದು ಬಂದವರಿಗೆ ಹಣ್ಣಿಲ್ಲವೊ
ಕುಸುಮ ವಾಸನೆಯಿಲ್ಲ ಕುಳ್ಳಿರಲು ಸ್ಥಳವಿಲ್ಲ
ವಿಷಮರ ದುಸ್ಸಂಗ ಪಡೆದರೇನುಂಟು || ೧ ||

ಊರ ಹಂದಿಗೆ ಅಲಂಕಾರವ ಮಾಡಲು
ನಾರುವ ದುರ್ಗಂಧ ಬಿಡಬಲ್ಲುದೆ
ಸಾರಸತ್ವ ಜ್ಞಾನ ಪಾಪಿಗೆ ಹೇಳಲು
ಕ್ರೂರ ಬುದ್ಧಿಯ ಬಿಟ್ಟು ಸಜ್ಜನನಪ್ಪನೆ || ೨ ||

ತನ್ನಿಂದ ಉಪಕಾರ ತೊಟಕಾದರು ಇಲ್ಲ
ಬಿನ್ನಾಣ ಮಾತುಗಳು ಮೊದಲೇ ಇಲ್ಲ
ಪನ್ನಗ ಶಯನ ಪುರಂದರ ವಿಠ್ಠಲನಲ್ಲದೆ
ಅನ್ಯ ದೈವಗಳ ಭಜಿಸುವ ನರರು || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಇಲ್ಲಿ ಜ್ಞಾನ ಮಾರ್ಗದ ಪ್ರಶಂಸೆಯಿದೆ. ಸಂಸಾರದಲ್ಲಿ ಹೇಯ ಬುದ್ಧಿ, ಸಂನ್ಯಾಸ, ದೇಹ ದಂಡನೆ, ವ್ರತ, ನೇಮ, ಕರ್ಮ, ಮಡಿ, ಜಪ, ತಪಗಳು ಭಗವತ್ ಸಾಕ್ಷಾತ್ಕಾರಕ್ಕೆ ಪ್ರಧಾನ ಸಾಧನಗಳಲ್ಲ.

ಸಂಸಾರದಲ್ಲಿದ್ದುಕೊಂಡೇ, ಸಾಮಾನ್ಯ ಜೀವನ ನಡೆಸುತ್ತಲೇ, ಮಾಹಾತ್ಮ್ಯ ಜ್ಞಾನವನ್ನು ಪಡೆದುಕೊಂಡು ಬಿಂಬಾಪರೋಕ್ಷ ಮಾಡಿಕೊಳ್ಳಬಹುದು.

**Classification:** Keerthane
**Ankita:** purandara vittala
**Location:** NA
**Category:** Bootakatana
**Sub-Category:** jnana, mara, jana, neralu, hasive, hannu, gandha, visha, handi, ooru, papa, buddi, daiva, bhajane,
**Pravachana:** NA
**Explanation:** NA